

ಗಿಂಡಿ ತೆಗೆದುಕೊಂಡು 'ನೀ ಇದ್ದೆಂತ ಕಾಶಿಯಾತ್ರಾ ಆರಾಮ ಆತಪಾ. ಉತ್ತರ ಭಾರತ ನೋಡ್ಲಿಕ್ಕಾತು' ಎನ್ನುತ್ತ ಹಿಂದಿರುಗಿದರು. ನನ್ನ ಟ್ರೇನಿಂಗ್ ಮುಗಿದು ಬೀಳ್ಕೊಡುಗೆಯೂ ಆಗಿತ್ತು. ರೈಲಿನ ಟಿಕೆಟ್ ರಾತ್ರಿ ಹತ್ತಕ್ಕೆ ಬುಕ್ ಆಗಿತ್ತು. ಕಾಶಿಯ ವಾಸ ಇನ್ನೇನು ಕೊನೆಗೊಳ್ಳಲಿತ್ತು. ಬೆಳಿಗ್ಗೆ ಸುಶೀಲಾ ವೈನಿ ಭೇಟಿಯಾಗಿದ್ದು... ಅಚ್ಯುತನ ನೆನಪು ಎದೆಯಾಳದಿಂದ ಪುಟಿದು ಬಂದಿತ್ತು.

ಎಲ್ಲ ಪ್ಯಾಕಿಂಗ್ ಮುಗಿಸಿದವನಿಗೆ ಗಂಗಾತೀರ ಮತ್ತೆ ಸೆಳೆದಿತ್ತು. ಕೈಯಲ್ಲಿ ಬೈನಾಕ್ಯುಲರ್ ಹಿಡಿದು ಗಂಗೆಯ ತಟಕ್ಕೆ... ದಶಾಶ್ವಮೇಧ ಘಾಟಿಗೆ ಬಂದೆ. ನಿತ್ಯ ಚಹಾ ಕುಡಿಯುತ್ತಿದ್ದ ಭೈಯ್ಯಾನಿಗೆ ಊರಿಗೆ ಹಿಂದಿರುಗುವ ವಿಷಯ ಹೇಳಿದೆ. ಅವನೂ ಅಂದು ದುಡ್ಡು ತೆಗೆದುಕೊಳ್ಳಲೇ ಇಲ್ಲ. ಪಾನವಾಲಾನದ್ದೂ ಇದೇ ಕಥೆ. ನಿತ್ಯ ಮೆಲ್ಲುತ್ತಿದ್ದ ಬನಾರಸಿ ಪಾನ ಇಂದು ಹಾಗೇ ಕೊಟ್ಟಿದ್ದ. ಒಮ್ಮೊಮ್ಮೆ ಇಲ್ಲಿಯ ಜನರ ಬಗ್ಗೆ ಯೋಚಿಸಿದಾಗ ವಿಚಿತ್ರ ಎನಿಸುತ್ತಿತ್ತು. ಅವರು ಎಂದಿಗೂ ವಿಶ್ವನಾಥನಿಗೆ ಬನಾರಸಿಯ ವಿಶ್ವನಾಥ ಎಂದಿಲ್ಲ. ಯಾವಾಗಲೂ ಕಾಶಿ ವಿಶ್ವನಾಥನೇ. ಕಾಶಿ ಪಾನ ಅಥವಾ ಕಾಶಿಯ ಸೀರೆ ಎಂದಿಲ್ಲ. ಅದೇನಿದ್ದರೂ ಬನಾರಸಿ ಸೀರೆ... ಬನಾರಸಿ ಪಾನ. ಊರು ಒಂದೇ ಆದರೂ ಹೆಸರು... ಭಾವ ಬೇರೆ ಬೇರೆ. ಹಾಗೆಯೇ ಗಂಗೆಯ ತೀರವನ್ನು ನೋಡುತ್ತಾ ಕುಳಿತಿದ್ದೆ. ಸೂರ್ಯ ಅಸ್ತಮಿಸುವ ಯೋಚನೆಯಲ್ಲಿದ್ದರೂ ಬಿಸಿಲಿತ್ತು. ಹೊಂಬಣ್ಣ ಎಲ್ಲೆಲ್ಲೂ ಹರಡಿ ಓಕುಳಿಯಾಡಿದಂತಿತ್ತು. ಯಾರೋ ಗಂಗೆಯಲ್ಲಿ ಸರಾಗವಾಗಿ ಈಜುತ್ತಿದ್ದರು. ಡಾಲ್ಫಿನ್‌ನಂತೆ ಮೇಲೆದ್ದು ಮತ್ತೆ ನೀರಿನಾಳಕ್ಕೆ ಸೇರಿಕೊಳ್ಳುವ ದೃಶ್ಯ ಮೋಹಕವೆನಿಸಿತು. ಅವನ ಬೆನ್ನು ನನಗೆ ಸ್ಪಷ್ಟವಾಗಿ ಕಾಣುತ್ತಿತ್ತು. ಅದೆಷ್ಟು ಪರಿಣಿತಿ ಇರಬೇಕು ಈ ವ್ಯಕ್ತಿಗೆ... ಎಂದುಕೊಳ್ಳುತ್ತಾ ಬೈನಾಕ್ಯುರ್‌ನ ದೃಷ್ಟಿ ಅತ್ತಲೇ ಕೀಲಿಸಿದೆ. ಮುಳುಗೇಳುತ್ತಿದ್ದ ವ್ಯಕ್ತಿಯ ಬೆನ್ನ ಮೇಲೆ ಅಗಲವಾದ ಹಸಿರು ಮಚ್ಚೆ. ಕುತೂಹಲದಿಂದ ಬೈನಾಕ್ಯುಲರ್‌ನ ಕಣ್ಣನ್ನು ಇನ್ನಷ್ಟು ದೊಡ್ಡದು ಮಾಡಿದೆ. ಅಸ್ಪಷ್ಟವಾಗಿದ್ದ ಅಕ್ಷರಗಳು ಸೇರಿ 'ಚಿದು' ಎಂಬ ಬರಹ. 'ಅರ್ರೇ!' ಎಂದು ಕೂಗಿದೆ. ಹೌದು... ಅನುಮಾನವೇ ಇಲ್ಲ. ಅವೇ ಅಕ್ಷರಗಳು... ನನ್ನನ್ನೇ ಮರೆತು ಕೇಕೆ ಹಾಕುತ್ತ, 'ಅಚ್ಯ್ಯು' ಎಂದು ಕೂಗಿದೆ. ಆ ವ್ಯಕ್ತಿಗೆ ಕೇಳಿಸಲಿಲ್ಲ. ಕೊನೆಗೂ ಪದ್ದಕ್ಕ ಹೇಳಿದ್ದೇ ನಿಜವಾಯಿತು. 'ಎಲ್ಲೋ ಅದಾನ... ಬರ್ತಾನ. ಬಂದಾಗ ನನ್ನ ಕಡೆ ಕರಕೊಂಡು ಬಾ'ಎಂದ ಧ್ವನಿ